**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ–56/2023**

ಪಿ.ಡಬ್ಲ್ಯೂಃ– 4
ಸಿ.ಡಬ್ಲ್ಯೂಃ– 6

ಸಾಕ್ಷಿದಾರರ ಹೆಸರುಃ : ಕಿರಣ

ತಂದೆಯ ಹೆಸರುಃ : ತೊಂಡೇಶ

ವಯಸ್ಸುಃ : 32 ವರ್ಷ

ವೃತ್ತಿಃ : ವ್ಯವಸಾಯ

ವಾಸಃ : ಬಿಕ್ಕೋಡು ಗ್ರಾಮ, ಆಲೂರು ತಾಃ .

**ದಿನಾಂಕಃ 20–12–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿದಾರರು ಗುರುತಿಸಿದ ದಾಖಲಾತಿ ಅಮಾನತ್ತು ಮಹಜರ್ ಆಗಿದ್ದು ಸದರಿ ದಾಖಲಾತಿಯನ್ನು ನಿಪಿ–53 ಎಂದು ಗುರುತಿಸಲಾಯಿತು. ನಿಪಿ–53 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ–53(ಎ) ಎಂದು ಗುರುತಿಸಲಾಯಿತು. ಸುಮಾರು 3 ವರ್ಷದ ಹಿಂದೆ ಬಿಕ್ಕೋಡಿನ ಮದಗಟ್ಟ ಸರ್ಕಲ್ ಬಳಿ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ಪೊಲೀಸರು ನಿಪಿ–53 ಮಹಜರಿಗೆ ನನ್ನ ಸಹಿ ಪಡೆದರು. ಸದರಿ ಮಹಜರನ್ನು ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಬರೆಯಲಾಯಿತು ಎಂದು ನನಗೆ ತಿಳಿದಿಲ್ಲ. ನಿಪಿ–52 ಫೋಟೋವಿನಲ್ಲಿ ಕಂಡು ಬರುವ ಸ್ಥಳದಲ್ಲಿ ಪೊಲೀಸರು ನಿಪಿ–53 ಮಹಜರಿಗೆ ನನ್ನ ಸಹಿ ಪಡೆದರು. ನಿಪಿ–

53 ಮಹಜರಿಗೆ ನನ್ನ ಜೊತೆ ನಮ್ಮ ಗ್ರಾಮದ ಸಂದಿಲ್ ರವರು ಸಹ ಸಹಿ ಮಾಡಿರುತ್ತಾರೆ. ಮಹಜರ್ ಕಾಲದಲ್ಲಿ ಪೊಲೀಸರು ಯಾವುದೇ ವಾಹನವನ್ನು ಅಥವಾ ವಾಹನದಲ್ಲಿದ್ದ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ನನಗೆ ತಿಳಿದಿಲ್ಲ. ನಿಪಿ–53 ಮಹಜರ್ ಕಾಲದಲ್ಲಿ ಪೊಲೀಸರು ಯಾವುದೇ ವ್ಯಕ್ತಿಗಳನ್ನು ಹಿಡಿದುಕೊಂಡ ಬಗ್ಗೆ ಈಗ ನನಗೆ ಮರೆತು ಹೋಗಿರುತ್ತದೆ. ಮುಮಾ–1 ರಿಂದ 14 ವಸ್ತುಗಳನ್ನು ನಾನು ಮಹಜರಿಗೆ ಸಹಿ ಮಾಡಿದ ಕಾಲದಲ್ಲಿ ನೋಡಿರುವುದಿಲ್ಲ. ನ್ಯಾಯಾಲಯದ ಮುಂದಿರುವ 2ನೇ ಆರೋಪಿ ವಿಜಯಕುಮಾರ ಹಾಗೂ 3ನೇ ಆರೋಪಿ ಮುನ್ಯಾಕೋಟ್ಯನ್ ಅನ್ನು ನಾನು ಮಹಜರ್ ಕಾಲದಲ್ಲಿ ನೋಡಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿಃ18.06.2022 ರ ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಹಳೇಬೀಡು ವೃತ್ತದ ಆರಕ್ಷಕ ವೃತ್ತ ನಿರೀಕ್ಷಕರಾದ ಶ್ರೀಕಾಂತ್ ರವರು ನನ್ನನ್ನು ಹಾಗೂ ಸೆಂದಿಲ್ ಕುಮಾರ್ ರವರನ್ನು ಪಿಎಸ್ಐ ಸುರೇಶ್ ರವರ ಮೂಲಕ ಬಿಕ್ಕೋಡಿನ ಮದಗಟ್ಟ ಸಶಕಲ್ ಹತ್ತಿರ ಕರೆಸಿಕೊಂಡು ಅರೇಹಳ್ಳಿ ಪೊಲೀಸ್ ಠಾಣಾ ಮೊಃನಂ. 50/22ಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿ ತನಿಖೆಗೆ ಸಹಕರಿಸುವಂತೆ ಕೋರಿರುತ್ತಾರೆಂದರೆ ಸರಿಯಲ್ಲ. ಆ ಕಾಲದಲ್ಲಿ ಸಿಪಿಐ ರವರು ಅವರ ವಶದಲ್ಲಿದ್ದ ಆರೋಪಿ ಶಂಕರಮಂಜುಗೌಡ, ವಿಜಯಕುಮಾರ್ ಹಾಗೂ ಮುನ್ಯಾಕೋಟ್ಯನ್ ರವರನ್ನು ತೋರಿಸಿ ಸಿಪಿಐ ರವರು ಆ ದಿನ

ಬೆಳಿಗ್ಗೆ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ಈ ಮೂರು ಜನ ಆರೋಪಿಗಳು ತಮ್ಮ ಸಹಚರರಾದ ಡೇವಿಡ್ ಹಾಗೂ ಶರ್ಮಾ ರವರೊಂದಿಗೆ ಟಾಟಾ ಸುಮೋ ವಾಹನದಲ್ಲಿ ದರೋಡೆ ಮತ್ತು ವಾಹನ ಕಳ್ಳತನ ಮಾಡುವ ಉದ್ದೇಶದಿಂದ ಆಯುಧಗಳನ್ನು ಹಾಗೂ ವಾಹನ ಕಳ್ಳತನ ಮಾಡಲು ಉಪಯೋಗಿಸುವ ವಸ್ತುಗಳನ್ನು ಇಟ್ಟುಕೊಂಡು ಸಕಲೇಶಪುರ ಕಡೆಯಿಂದ ಬೇಲೂರು ಕಡೆಯಿಂದ ಟಾಟಾ ಸುಮೋ ವಾಹನದಲ್ಲಿ ಬರುತ್ತಿದ್ದು ಸಿಪಿಐ ರವರು ಟಾಟಾ ಸುಮೋ ವಾಹನವನ್ನು ತಡೆದಾಗ ವಾಹನದಲ್ಲಿದ್ದ ಡೇವಿಡ್ ಹಾಗೂ ಶರ್ಮಾ ರವರು ಓಡಿ ಹೋಗಿದ್ದು ವಾಹನದಲ್ಲಿದ್ದ ಆರೋಪಿ 1, 2 ಹಾಗೂ 3 ರವರನ್ನು ಸಿಪಿಐ ರವರನ್ನು ಹಿಡಿದು ವಿಚಾರಿಸಿರುವ ಬಗ್ಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಪಂಚರಾದ ನಮ್ಮ ಸಮಕ್ಷಮ ಆರೋಪಿಗಳು ತಾವು ಟಾಟಾ ಸುಮೋ ವಾಹನದಲ್ಲಿ ದರೋಡೆ ಹಾಗೂ ಕಳ್ಳತನ ಮಾಡುವ ಉದ್ದೇಶದಿಂದ ಆಯುಧಗಳನ್ನು ಹಾಗೂ ವಾಹನ ಕಳವು ಮಾಡಲು ಬಳಸುವ ವಸ್ತುಗಳನ್ನು ಇಟ್ಟುಕೊಂಡು ಪ್ರಯಾಣಿಸುತ್ತಿರುವ ಬಗ್ಗೆ ಒಪ್ಪಿಕೊಂಡರು ಎಂದರೆ ಸರಿಯಲ್ಲ. ನಂತರ ಪಂಚರಾದ ನಾವು ಟಾಟಾ ಸುಮೋ ವಾಹನವನ್ನು ಪರಿಶೀಲಿಸಲಾಗಿ ಸದರಿ ವಾಹನದ ಹಿಂದೆ ಮುಂದೆ ಕೆಎ.01.ಎಬಿ.1421 ಎಂದು ನಂಬರ್ ನಮೂದಿಸಿದ್ದು ಸದರಿ ನಂಬರ್ ಪ್ಲೇಟನ್ನು ಬದಲಾಯಿಸಿರುವುದು ಕಂಡು ಬಂತು ಎಂದರ ಸರಿಯಲ್ಲ. ಪೊಲೀಸರು ವಾಹನದ ಇಂಜಿನ್ ಹಾಗೂ ಚಾಸಿಸ್ ನಂಬರಿನ ಆಧಾರದ ಮೇಲೆ ಮೊಬೈಲಿನಲ್ಲಿ ವಾಹನದ ನೊಂದಾವಣಿ ಸಂಖ್ಯೆಯನ್ನು ಪರಿಶೀಲಿಸಲಾಗಿ ಸದರಿ ಟಾಟಾ ಸುಮೋ ವಾಹನದ ನಿಜವಾದ ನೊಂದಾವಣಿ ಸಂಖ್ಯೆ ಟಿಎನ್.23.ಬಿಟಿ.9379 ಆಗಿರುವುದು ಕಂಡು ಬಂತು ಎಂದರೆ ನನಗೆ ತಿಳಿದಿಲ್ಲ. ಆರೋಪಿಗಳು ಟಾಟಾ ಸುಮೋ ವಾಹನವನ್ನು ತಮಿಳುನಾಡಿನಲ್ಲಿ ಕಳ್ಳತನ ಮಾಡಿ ನಂಬರ್ ಪ್ಲೇಟ್ ಬದಲಿಸಿರುವುದು

ತಿಳಿಯಿತು ಎಂದರೆ ಸರಿಯಲ್ಲ. ನಂತರ ಆರೋಪಿಗಳು ಟಾಟಾ ಸುಮೋ ವಾಹನದಲ್ಲಿ ದರೋಡೆ ಮಾಡುವ ಸಲುವಾಗಿ ಹಾಗೂ ವಾಹನ ಕಳ್ಳತನ ಮಾಡುವ ಸಲುವಾಗಿ ಇಟ್ಟುಕೊಂಡಿದ್ದ ಆಯುಧಗಳು ಹಾಗೂ ವಸ್ತುಗಳನ್ನು ಪರಿಶೀಲಿಸಲಾಗಿ ವಾಹನದಲ್ಲಿ ಎರಡು ಮಚ್ಚುಕತ್ತಿಗಳು, ಕಬ್ಬಿಣದ ರಾಡು, ಒಂದು ಚಾಕು, ಕಪ್ಪು ಬಣ್ಣದ ಕವರಿನಲ್ಲಿ ಕಾರದ ಪುಡಿ, ಒಂದು ಬಿಳಿಯ ಬಟ್ಟೆಯ ಬ್ಯಾಗಿನಲ್ಲಿ ಒಂದು ಟಾರ್ಚ್ ಲೈಟ್, ಒಂದು ಅರ, ಐದು ಸ್ಪ್ಯಾನರ್, ಒಂದು ಎಲೆನ್ ಕೀ, ಒಂದು ಸ್ಕ್ರ್ಯೂ ಡ್ರೈವರ್, ಒಂದು ಕಟಿಂಗ್ ಪ್ಲೇಯರ್, ಒಂದು ಸುತ್ತಿಗೆ, ಒಂದು ಬಾಕ್ಸ್ ರಾಡು, ಒಂದು ವೀಲ್ ಬಾಕ್ಸ್, ಒಂದು ಕಟರ್ ಇರುವುದು ಕಂಡು ಬಂತು ಎಂದರೆ ಸರಿಯಲ್ಲ. ಆರೋಪಿಗಳು ಮೇಲೆ ಕಾಣಿಸಿದ ವಸ್ತುಗಳನ್ನು ದರೋಡೆ ಮಾಡುವ ಸಲುವಾಗಿ ಮತ್ತು ವಾಹನಗಳನ್ನು ಕಳ್ಳತನ ಮಾಡುವ ಸಲುವಾಗಿ ಇಟ್ಟುಕೊಂಡಿರುವ ಬಗ್ಗೆ ಒಪ್ಪಿಕೊಂಡರು ಎಂದರೆ ಸರಿಯಲ್ಲ. ನಂತರ ಸಿಪಿಐ ರವರು ಮೇಲೆ ಕಾಣಿಸಿದ ಎಲ್ಲಾ ವಸ್ತುಗಳನ್ನು ಹಾಗೂ ಟಾಟಾ ಸುಮೋ ವಾಹನವನ್ನು ಪಂಚರಾದ ನಮ್ಮ ಸಮಕ್ಷಮ ನಿಪಿ–53 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನಿಪಿ–53 ಮಹಜರಡಿಯಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಈಗ ನಾನು ನ್ಯಾಯಾಲಯದ ಮುಂದೆ ನೋಡುತ್ತಿರುವ ಮುಮಾ–1 ರಿಂದ 14 ಆಗಿರುತ್ತವೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರಲ್ಲಿ ಈಗ ನನಗೆ ಓದಿ ಹೇಳಲಾದಂತೆ "ದಿ:18.06.2022 ರಂದು --------------- ನನ್ನ ಹೇಳಿಕೆ ನೀಡಿರುತ್ತೇನೆ" ಎಂದು ನಿಪಿ–54 ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ–53 ಮಹಜರ್ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ-2, 3 ಹಾಗೂ 6 ರವರ ಪರ ವಕೀಲರಿಂದಃ**

ಪಾಟಿ ಸವಾಲು ಇರುವುದಿಲ್ಲ ಎಂದು ಆರೋಪಿಗಳ ಪರ ವಕೀಲರು ತಿಳಿಸಿರುತ್ತಾರೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.